ಶ್ರೀ ವಿ. ಮುನಿಯಪ್ಪ.—ಕಳೆದ 15 ವರ್ಷಗಳಿಂದ ತಾವು ಈ 467 ಎಕರೆ ಜಮೀನಿನ ಬಗ್ಗೆ ವಸೂಲಾತ್ತಿಡಿರತಕ್ಕ ಕಂದಾಯವನ್ನು ಆ ರೈತರಿಗೆ ಈಗ ರೀ ಫಂಡ್ ಮಾಡುವಂತೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಜಿ. ಬಸಪ್ಪ.—ರಸ್ತೆ ಕಾಮಗಾರಿ ಪೂರ್ತಿಯಾಗಿ 10–15 ವರ್ಷಗಳಾಗಿದ್ದರೂ, ಇನ್ನೂ ಅಕ್ಸೆಪ್ಟೆನ್ ಪ್ರೊಸೀಡಿಂಗ್ಸ್ ಪೂರ್ತಿಯಾಗದೇ ಇರುವಂಥ ನಿದರ್ಶನಗಳು ನಮ್ಮ ಸಂಸ್ಥಾನದಲ್ಲಿ ಎಷ್ಟಿರುತ್ತವೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಜಿ. ಬಸಪ್ಪ.—ಹೊಸದುರ್ಗ ಜಿಲ್ಲಾಬೋರ್ಡ್ ರಸ್ತೆ ವಿಚಾರದಲ್ಲಿ ಹೋದ ಬಜೆಟ್ ಅಧಿವೇಶನದಲ್ಲಿ ಇದೇ ಸಭೆಯಲ್ಲಿ ಚರ್ಚೆಯಾಗಿ ಹೊಸದುರ್ಗ ತಾಲ್ಲೂಕಿನಲ್ಲಿ ಒಂದು ರಸ್ತೆಯಾಗಿ ಹನ್ನೆರಡು ವರ್ಷಗಳಾಗಿದ್ದರೂ ಇನ್ನೂ ಅಕ್ಸೆಪ್ಟೆಡ್ ಪ್ರೊಸೀಡಿಂಗ್ಸ್ ಪೂರೈಸಿಲ್ಲವೆಂಬುದು ತಮ್ಮ ಗಮನದಲ್ಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್

Acquisition of lands in Survey Nos. 15, 17 and 18 of Mylnahalli Village to build Vasantapur Village.

Q.—501. Sri S. M. LINGAPPA (Krishnarajpet).—

Will the Government be pleased to state :—

(*a*) whether the villagers of Vasantapur in Krishnarajpet Taluk have requested Government to acquire the land situated in Survey Nos. 15, 17 and 18 belonging to Mylnahalli Village with a view to build their village on the said land ;

(*b*) if so, the action taken by Government in that behalf ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The Deputy Commissioner has been requested to forward the proposal to Government for sanction. There has been some delay as only a small part of the cost of acquisition has been credited by the Village Panchayet and the full amount not yet credited.

ಶ್ರೀ ಎಸ್. ಎಂ. ಲಿಂಗಪ್ಪ.—ತಮ್ಮ (ಎ) ಪ್ರಶ್ನೆಯ ಉತ್ತರಕ್ಕೆ ಅನುಸಾರವಾಗಿ ಅವರು ಖಜಾನೆಗೆ ಎಷ್ಟು ಹಣವನ್ನು ಪಾವತಿ ಮಾಡಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ರೂ. 155-1-0.

ಶ್ರೀ ಎಸ್. ಎಂ. ಲಿಂಗಪ್ಪ.—ಸದರಿ ಗ್ರಾಮದವರು ಸ್ವ್ಯಾಜುಟೆರಿ ಅಲೋಯನ್ಸ್ ಮನ್ನಾ ಮಾಡಬೇಕೆಂದು ಸರ್ಕಾರಕ್ಕೆ ಮನವಿಯನ್ನೇನಾದರೂ ಸಲ್ಲಿಸಿದ್ದಾರೆಯೇ ?

Sri T. CHANNIAH.—Information is not available.

Layouts of Ramachandrapura and Errappa Blocks near Sriramapura and of Rajamahal and Upparahalli near Vasantapura in Bangalore City.

Q.—510. Sri V. R. NAIDU (Malleswaram).—

Will the Government be pleased to state :—

(*a*) whether they have approved of the layouts of Ramachandrapura and Errappa Blocks near Sriramapura and of Rajamahal and Upparahalli near Vasantanagar in Bangalore City ;

(*b*) if so, the reason for the delay in taking further steps ;

(*c*) the expenditure they will have to incur for these layouts ?

A.—Sri T. CHANNIAH (Minister for Public Health and Local Self-Government).—

(*a*) Schemes for the improvement of Ramachandrapura and Lakshminarayanapuram have been approved and of Rajamahal and Upparahalli near Vasanthapura are under consideration.

(*b*) The works in respect of which the schemes are approved could not be taken up owing to paucity of funds. It is now proposed to recover at least 75 per cent of the layout charges from the persons who are to benefit by these improvements. Preliminary surveys for this work have now commenced.

(*c*) For the improvement of Ramachandrapuram and Lakshminarayanpuram ; Rs. 19,24,900. For the improvement of Rajamahal and Upparahalli near Vasanthanagar : Rs. 12,18,000.

ಶ್ರೀ ವಿ. ಆರ್. ನಾಯ್ಡು.—(ಎ) ಪ್ರಶ್ನೆಗೆ ಉತ್ತರವಾಗಿ schemes have been approved ಎಂದು ಉತ್ತರ ಕೊಟ್ಟಿದ್ದೀರಿ. ಎಷ್ಟು ವರ್ಷಗಳ ಕೆಳಗೆ ಇದನ್ನು ತಾವು ಅನುಮೋದಿಸಿದ್ದು ?

ಶ್ರೀ ಟಿ. ಚನ್ನಯ್ಯ.—ತಾ। 20-11-51 ರಲ್ಲಿ.

ಶ್ರೀ ವಿ. ಆರ್. ನಾಯ್ಡು.—ಸದರೀ ಸ್ಥಳಗಳಲ್ಲಿ ವಾಸವಾಡತಕ್ಕ ಜನರಿಂದ 'lay out' ಧಾರ್ಜಿನಲ್ಲಿ ಶೇಕಡ 75ರಷ್ಟು ಹಣವನ್ನು ವಸೂಲ್ಮಾಡಬೇಕೆಂದು ಸರ್ಕಾರೀ ಹುಕುಂ ಆಗಿದೆಯೇ?

ಶ್ರೀ ಟಿ. ಚನ್ನಯ್ಯ.—ಟ್ರಸ್ಟ್‌ಬೋರ್ಡ್‌ನವರು ಮಾಡಿರಬಹುದು.

ಶ್ರೀ ವಿ. ಆರ್. ನಾಯ್ಡು.—ಇತರ ಕಡೆಗಳಲ್ಲಿ 'lay out' ಮಾಡಿದಬಗ್ಗೆ ಇದೇ ರೀತಿ ಜನಗಳಿಂದ ದುಡ್ಡನ್ನು ವಸೂಲ್ಮಾಡಲಾಗುತ್ತೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ವಿ. ಆರ್. ನಾಯ್ಡು.—ಹಾಗಾದರೆ ಈ ವ್ಯತ್ಯಾಸಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಇದನ್ನು ಟ್ರಸ್ಟ್ ಬೋರ್ಡಿಗೆ ಅಕ್ವೈರ್ ಮಾಡಿಕೊಳ್ಳಲಾಗಿದೆ. ಇದು ರೆವಿನ್ಯೂ ಲ್ಯಾಂಡ್. ಅಲ್ಲಿ unauthorised constructions ಜಾಸ್ತಿಯಾಗಿವೆ. ಒಂದು ಚದುರ ಗಜಕ್ಕೆ 4 ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಟ್ರಸ್ಟ್ ಬೋರ್ಡಿನವರು ತಿಳಿಸಿದ್ದಾರೆ. ಈಗ ಅಲ್ಲಿ 'lay-out' ಮಾಡಲು ಶೇಕಡ 75ರಷ್ಟು ಹಣವನ್ನು ಅಲ್ಲರತಕ್ಕ ಜನರಿಂದ ವಸೂಲ್ಮಾಡಬೇಕೆಂದು ಆಲೋಚನೆ ಮಾಡಲಾಗಿದೆ.

ಶ್ರೀ ವಿ. ಆರ್. ನಾಯ್ಡು.—ಅಲ್ಲ ಎಷ್ಟು ಸಾವಿರ ಮನೆಗಳಿವೆಯೆಂಬುದನ್ನು ತಿಳಿಸುವಿರಾ?

ಶ್ರೀ ಟಿ. ಚನ್ನಯ್ಯ.—ಇನ್ನೂ ನಿರ್ಧಾರ ಮಾಡಿಲ್ಲ, 'lay-out' ಮಾಡಿದಮೇಲೆ ಗೊತ್ತಾಗುತ್ತದೆ.

ಶ್ರೀ ವಿ. ಆರ್. ನಾಯ್ಡು.—ಹಾಲ ಅಲ್ಲಿ ಇರತಕ್ಕವುಗಳೆಲ್ಲಾ ಗುಡಿಸಲುಗಳಾಗಿರುವುದರಿಂದ ಹಣದ ವಸೂಲಿಗೆ ತಾವು ಯಾವ ರೀತಿ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಿ? ಆ ಜನರಿಗೆ ಈಗ ತೊಂದರೆ ಯಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅಲ್ಲಿ 'lay-out' ಮಾಡಲು 19 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಅಲ್ಲ ರಸ್ತೆಗಳನ್ನು ಮಾಡಿದನಂತರ ಯಾವ ಯಾವ ಮನೆಗಳನ್ನು ಒಡೆದು ಹಾಕಬೇಕಾಗುತ್ತದೆ ಎಂಬುದಕ್ಕೆಲ್ಲಾ ಒಂದು ವ್ಯವಸ್ಥೆ ಮಾಡಬೇಕಾಗಿದೆ.

ಶ್ರೀ ವಿ. ಆರ್. ನಾಯ್ಡು.—(ಸಿ) ಪ್ರಶ್ನೆಗೆ ಉತ್ತರವಾಗಿ ರಾಮಚಂದ್ರಪುರಂ ಮತ್ತು ಲಕ್ಷ್ಮೀನಾರಾಯಣಪುರಂ ಇವುಗಳ ಅಭಿವೃದ್ಧಿಗಾಗಿ 19,24,900 ರೂಪಾಯಿಗಳು ಮತ್ತು ರಾಜಮಹಲ್ ಮತ್ತು ಉಪ್ಪಾರ್ ಹಳ್ಳಿ ಇವುಗಳ ಅಭಿವೃದ್ಧಿಗೆ 12,18,000 ರೂಪಾಯಿಗಳು ಬೇಕಾಗುತ್ತವೆಂದು ತಿಳಿಸಿದ್ದೀರಿ. ಆದರೆ, ಅಲ್ಲರತಕ್ಕವರೆಲ್ಲರೂ ತೀರ ಬಡವರಾಗಿರುವುದರಿಂದ 'lay-out' ಧಾರ್ಜುಗಳನ್ನು ಕೊಡುವುದಕ್ಕೆ ಶಕ್ತಿ ಇಲ್ಲದೆ ಹೋದರೆ ಸರ್ಕಾರದವರು ಏನು ಮಾಡುತ್ತೀರಿ?

ಶ್ರೀ ಟಿ. ಚನ್ನಯ್ಯ.—ಅಂಥಾ ಕೇಸುಗಳು ಬಂದಾಗ ಯೋಚನೆ ತ್ತೇವೆ. ಈಗಲೇ ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ.

Applications for grant of land in Bangalore District.

Q.—343. Sri A. V. NARASIMHA REDDY (Bangalore South).—

Will the Government be pleased to state:—

(*a*) the number of applications for grant of land received in Bangalore District during the year 1951-52 (talukwar information may kindly be furnished);

(*b*) the names of persons and extent of land granted to each person during that period (talukwar information may kindly be given)?

A.—Sri KADIDAL MANJAPPA (Minister for Revenue and Public Works).—

(*a*) and (*b*) The labour and the expenses involved in compiling the information required is commensurate with the result to be achieved.

ಶ್ರೀ ಎ. ವಿ. ನರಸಿಂಹರೆಡ್ಡಿ.—1952-53ನೇ ಸಾಲಿನಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ದರ್ಖಾಸ್ತ್ ಮೂಲಕ ಎಷ್ಟು ಜಮೀನನ್ನು ಕೊಡಲಾಗಿದೆಯೆಂಬುದನ್ನು ತಿಳಿಸುವುದಕ್ಕಾಗುತ್ತದೆಯೇ?

ಅಧ್ಯಕ್ಷರು.—ಉತ್ತರ ಹೇಳುವುದಕ್ಕಾಗುವುದಿಲ್ಲವೆಂದು ಪ್ರಶ್ನೋತ್ತರದಲ್ಲೇ ತಿಳಿಸಿದ್ದಾರೆ.

Sri KADIDAL MANJAPPA.—He has not asked I can give him the number of applications for each taluk; I have got them. But I could not get the names of the applicants. The number of applications for grant of land received in Bangalore District for 1951-52 is 3017. 51-52ರಲ್ಲಿ 3017 ಅರ್ಜಿಗಳು ಬಂದಿದ್ದುವು; 1452 ಜನರಿಗೆ ಜಮೀನನ್ನು ಕೊಡಲಾಯಿತು.

ಶ್ರೀ ಎ. ವಿ ನರಸಿಂಹ ರೆಡ್ಡಿ.—ಯಾರು ಯಾರಿಗೆ ಅಧಿಕ ಪ್ರಮಾಣದಲ್ಲಿ ಮತ್ತು ಯಾರು ಯಾರಿಗೆ ಕನಿಷ್ಠ ಪ್ರಮಾಣದಲ್ಲಿ ಜಮೀನು ಕೊಡಲಾಗಿದೆ ಎಂಬುದನ್ನು ತಿಳಿಸುವಿರಾ?

Sri KADIDAL MANJAPPA.—That information I cannot give.

Special grants sanctioned to each District.

Q.—472. Srimathi B. L. SUBBAMMA (Chikmagalur-Mudigere).—

Will the Government be pleased to state:—

(*a*) the extent of the special grant sanctioned to each district since the last five years;

(*b*) the works executed out of the said grants?

A.—Sri KADIDAL MANJAPPA (Minister for Revenue and Public Works).—

(*a*) and (*b*) The fund head is not stated and so it is not possible to furnish information.